ಶ್ರೀ ಧರ್ಮಸಿಂಗ್.—ನಿಷ್ಕ್ರಿ ಜೊತೆಯಲ್ಲಿ ಮಾತನಾಡುವಾಗ್ಗೆ ಕಾರ್ಮಿಕರಿಗೆ, ಮಹಿಳೆಯರಿಗೆ, ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ಹೇಳಿದ್ದೇನೆ. ಎಲ್ಲಾ ಕಡೆ ಯೂನಿಫಾರಂ ಆಗಿ ಮಲ್ಟಿ ಮೆಂಬರ್ ಕಾನ್‌ಸ್ಟ್ಯೂಯನ್ಸಿ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ನೀವು ಕೊಟ್ಟಂತ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ಬೆಂಗಳೂರು ಕ್ಷೇತ್ರದಲ್ಲಿ ಡಿ ಲಿಮಿಟೇಷನ್ ಕಾರ್ಯ ಇನ್ನೂ ಅಂತಿಮಗೊಳಿಸಿಲ್ಲವೆಂದು ಹೇಳಿದ್ದೀರಿ. ಬೆಂಗಳೂರು ನಗರಕ್ಕೆ ಹೊಂದಿಕೊಂಡಂತಿರುವ ಐಟಿಐ ಮತ್ತು ಹೆಚ್‌ಎಎಲ್ ಪ್ರದೇಶಗಳನ್ನು ನಿಮ್ಮ ಕಾರ್ಪೊರೇಷನ್ ವ್ಯಾಪ್ತಿಗೆ ಸೇರಿಸಿಕೊಳ್ಳುವ ಸೂಚನೆ ಏನಾದರೂ ಇದೆಯೆ?

ಶ್ರೀ ಧರ್ಮಸಿಂಗ್.—ತಾವು ಹೇಳುವುದನ್ನು ಯೋಚನೆ ಮಾಡುತ್ತೇವೆ.

ಡಾ॥ ತಿಮ್ಮೇಗೌಡ.—ಯೋಚನೆ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ, ಆದರೆ ಇದರ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಿ ಸಾರ್ವಜನಿಕರಿಂದ ಅಬ್ಜಕ್ಷನ್ಸ್ ಕಾಲ್‌ಫರ್ ಮಾಡಿದ್ದೀರಾ?

ಶ್ರೀ ಆರ್. ಗುಂಡೂರಾವ್.—ಮಾಡಿದ್ದೇವೆ. ಅವರು ಕೆಲವು ಕ್ಲಾರಿಫಿಕೇಷನ್ ಕೇಳಿದ್ದಾರೆ....

ಡಾ॥ ಹೆಚ್.ಎಲ್. ತಿಮ್ಮೇಗೌಡ.—ನೀವು ಸ್ವಾಚುಟರಿ ಅಬ್ಜೆಕ್ಷನ್ಸ್, ಪಬ್ಲಿಕ್ ಅಬ್ಜೆಕ್ಷನ್ಸ್. ಪಬ್ಲಿಕ್ ಸಜೆಷನ್ಸ್ ಮುಂತಾದ್ದನ್ನೆಲ್ಲಾ ಕೇಳಿದ್ದೀರಾ ?

ಶ್ರೀ ಆರ್. ಗುಂಡೂರಾವ್.—ನಾವು ಕೇಳಿದ್ದೇವು. ಅದಕ್ಕೆ ಅವರಲ್ಲಿ ಕೆಲವರು ಕೆಲವು ಕ್ಲಾರಿಫಿಕೇಷನ್ಸ್ ಕೇಳಿದ್ದಾರೆ, ಅಂತೂ ಇದನ್ನು ಮಾಡುತ್ತೇವೆ.

SRI B.B. SAYANAK.—May I know in a Multi-member Constituency how many members will be there?

MR. SPEAKER.— Multi means always more than one.

SRI B.B. SAYANAK.—is there any uniform policy with regard to the number of members?

SRI DHARAM SINGH,—It may be between one and five.

ಪ್ರಶ್ನೆ ೧ (ಟಿಪ್ಪಿ) ಮಾನ್ಯ ಸದಸ್ಯರು ಹಾಜರಿರಲಿಲ್ಲ.

Formation of Layouts by BDA during 1979 to 81.

256. SHRI MALLUR ANANDA RAO (Rajajinagar).—Will the Chief Minister be pleased to state.—

(a) The total number of layouts formed by Bangalore Development Authority during 1978-79, 1979-80 and 1980-81; and the names of the layouts;

(b) the number of sites and house attotted or distributed to the people during these last three years (yearwise figures may be given);

(c) whether the Government is aware of the fact that there is heavy demand for owning sites by the poor and middle class people;

(d) what action would the Government propose to take to meet the demands of the people?

SRI R. GUNDU RAO (Chief Minister)

(a) Total number of layouts formed during
1978-79-3
1979-80-nil
1980-81-nil Total-3

Names of the 3 layout formed during 1978-79 are as under.

(i) West of Chord Road IV Stage.
(ii) Chandra layout
(iii) Further extension of Matadahalli layout.

(b)	No. of sites allotted	No. of houses allotted
1978-79	: 4050	1900
1979-80	: 450	130
1980-81	: nil	nil

(c) There is heavy demand from poor and middle class people for sites.

(d) To meet the demand for owning of the sites by the poor and middle-class people, the Bangalore Development Authority has formulated 15 new, schemes at an estimated cost of Rs. 6560.90 lakhs for the formation of sities covering an area of 193 acres 04 ½ guntas of land (Annexure "A" * Laid on the Table.

In the above 15 new schemes the total number of sites proposed to be formed would be 60,961 of which 31,508 sites are earmarked for Economically Weaker Section, 27,453 sites for General Category.

Formation of these layouts are not in progress as the land could not be acquired earlier due to promulgation of Urban Land Ceiling Act. Subsequently, the Government permitted the Bangalore Development Authority to proceed with acquisition proceedings, Accordingly action is taken and acquisition is in progress under Land Acquisition Act.

---

* Copies placed in the Karnataka Legislature Library vide No. 2, dated 22nd June 1981.

ಶ್ರೀ ಮಳ್ಳೂರು ಆನಂದರಾವ್ .—ಸ್ವಾಮಿ, ತಾವು ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ೧೯೭೮-೭೯ನೇ ಸಾಲಿನಲ್ಲಿ ಬಿ. ಡಿ. ಎ. ಯಿಂದ ಕೇವಲ ೩ ನಿವೇಶನಗಳನ್ನು ಹಂಚಿದ್ದು ಆನಂತರ ೧೯೭೯-೮೦ ಹಾಗೂ ೧೯೮೦-೮೧ನೇ ಸಾಲಿನಲ್ಲಿ ಒಂದು ಕೂಡ ನಿವೇಶನಗಳನ್ನಾಗಲಿ ಅಥವಾ ಲೇಔಟ್‌ಗಳನ್ನಾಗಲಿ ಮಾಡಿಲ್ಲ ಎಂದು ತಿಳಿದು ಬರುತ್ತದೆ. ಇದಕ್ಕೆ ಮುಖ್ಯ ಕಾರಣವೇನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್ .— ಬಿ. ಡಿ. ಎ. ನಲ್ಲಿ ನಾನಾರೀತಿಯ ಅಕ್ರಮಗಳನ್ನು ನಡೆದಿರುವುದು ತಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ. ಈ ಅಕ್ರಮಗಳನ್ನೆಲ್ಲಾ ಪೂರ್ತಿಯಾಗಿ ವಿಚಾರಣೆ ಮಾಡಿಸುವ ವ್ಯವಸ್ಥೆ ಮಾಡಿದ್ದೇವೆ. ಅಲ್ಲದೆ ಈ ಬಗ್ಗೆ ಈಗಾಗಲೇ ಉತ್ತರವನ್ನೂ ಕೂಡ ಕೊಟ್ಟಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್ .— ಆಲ್ಲಿ ಆಕ್ರಮಗಳು ನಡೆದಿರುವುದರ ಬಗ್ಗೆ ತನಿಖೆ ಕ್ರಮವನ್ನು ತೆಗೆದುಕೊಂಡಿರುವುದಕ್ಕೆ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ ಬಿ. ಡಿ. ಎ. ನಲ್ಲಿ ೧೯೭೯-೮೦ ಹಾಗೂ ೧೯೮೦-೮೧ರಲ್ಲಿ ಒಂದೂ ನಿವೇಶನವನ್ನಾಗಲಿ, ಲೇಔಟನ್ನಾಗಲಿ ಮಾಡದಿರುವುದಕ್ಕೆ ಮುಖ್ಯ ಕಾರಣವೇನೆಂಬುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್—ಈ ಹಿಂದೆ ಬನಶಂಕರಿ ಲೇಔಟ್‌ನಲ್ಲಿ ನಿವೇಶನಗಳನ್ನು ಹಂಚುವುದಕ್ಕೆ ಕ್ರಮ ತೆಗೆದುಕೊಂಡಿತ್ತು. ಈಗ ಹೊಸದಾಗಿ ನಿವೇಶನಗಳನ್ನು ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಪಿ. ರಾಮದೇವ್ .— ೧೯೭೯-೮೦ ಹಾಗೂ ೧೯೮೦-೮೧ರಲ್ಲಿ ಒಂದು ಸೈಟನ್ನೂ ಕೊಟ್ಟಿಲ್ಲ, ಅಲ್ಲದೆ ಸೈಟುಗಳ ವಿತರಣೆ ಸಂದರ್ಭದಲ್ಲಿ ವ್ಯಾಪಕವಾಗಿ ನಡೆದಿರತಕ್ಕ ಅಕ್ರಮಗಳನ್ನು ಕಂಡುಹಿಡಿದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರುವುದರಿಂದ ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಶಹಬಾಸ್‌ಗಿರಿಯನ್ನು ಕೊಡಬೇಕಾಗಿದೆ. ಆದರೆ ಆ ತನಿಖೆ ಯಾರ ಯಾರ ಮೇಲೆ ಮಾಡಲಾಗುತ್ತದೆ, ಹಾಗೂ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್ .— ಇದಕ್ಕೆ ತಾವು ಬೇರೆ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ .— ಸ್ವಾಮಿ, ಇನ್ನೂ ಸುಮಾರು ೨ ಲಕ್ಷ ಸಂಸಾರಗಳಿಗೆ ಮನೆಗಳನ್ನು ಒದಗಿಸಿಕೊಡಬೇಕಾಗಿದೆ. ೧೯೭೮-೭೯ರಲ್ಲಿ ೪೦೫೦ ಮನೆ ನಿವೇಶನಗಳನ್ನು ಬಿ, ಡಿ. ಎ. ಮುಂಖಾಂತರ ಕೊಟ್ಟಿದ್ದೀರಿ. ೧೯೮೦-೮೧ನೇ ಸಾಲಿನಲ್ಲಿ ಒಂದೂ ಕೂಡ ಕೊಟ್ಟಿಲ್ಲ. ಇದೇ ರೀತಿ ಮುಂದಂವರಿಯುವುದಾದರೆ ಈ ಬೆಂಗಳೂರು ನಗರದಲ್ಲಿ ಕೊಳಚೆಪ್ರದೇಶಗಳು ಬೆಳೆಯುತ್ತಾ ಹೋಗುವುದರಲ್ಲಿ ಸಂದೇಹವೇ ಇಲ್ಲದಂತಾಗುತ್ತದೆ. ಇದನ್ನು ತಾವು ಯೋಚನೆ ಮಾಡಿದ್ದೀರಾ ?

ಶ್ರೀ ಆರ್. ಗುಂಡೂರಾವ್ .— ನಾವು ಇದನ್ನು ಚೆನ್ನಾಗಿ ಯೋಚನೆ ಮಾಡಿಯೇ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಿದ್ದೇವೆ.

ಶ್ರೀ ಮಳ್ಳೂರು ಆನಂದರಾವ್ .— ಸ್ವಾಮಿ, ೧೫ ಲೇಔಟ್‌ಗಳಲ್ಲಿ ಸುಮಾರು ೬೦ ಸಾವಿರ ಮನೆ ನಿವೇಶನಗಳನ್ನು ಹಂಚುವ ಒಂದು ಪಟ್ಟಿಯನ್ನು ಒದಗಿಸಿದ್ದೀರಿ. ಈ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭ ಮಾಡಿದಿರಿ ? ಇದುವರೆಗೂ ಏತಕ್ಕೆ ಮುಗಿಸಲಿಲ್ಲ. ಜನರಿಗೆ ಯಾವಾಗ ಈ ನಿವೇಶನಗಳನ್ನು ಹಂಚುತ್ತೀರಿ ಇಷ್ಟು ತಡಮಾಡಲು ಮುಖ್ಯ ಕಾರಣವೇನು ?

ಶ್ರೀ ಆರ್. ಗುಂಡೂರಾವ್ .—ಭೂ ಸ್ವಾಧೀನ ಕಾಯಿದೆ ಪ್ರಕಾರ ನಾವು ಭೂಮಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಜನರು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಕೆಲವರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಅಂಥವರಿಗೆ ನಾವು ಕಾಲಾವಕಾಶ ಕೊಡಬೇಕಾಗುತ್ತದೆ. ಈ ರೀತಿಯ ಕಾರಣಗಳಿಂದಾಗಿ ಈ ಕಾರ್ಯ ನಿಧಾನವಾಗಿದೆ. ಆದರೂ ಈಗ ಇದನ್ನು ತುರ್ತಾಗಿ ಮಾಡುತ್ತಿದ್ದೇವೆ.

ಅಧ್ಯಕ್ಷರು .— ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.